## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ, ಇವರು ನಿಯಮ - 330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ.

**ಸೂಚನೆ :**

ಕರ್ನಾಟಕ ರಾಜ್ಯದಲ್ಲಿ ಪ್ರತಿದಿನ ಸರಾಸರಿ 1.8 ಕೋಟಿ ಲೀಟರ್‌ಗಳಷ್ಟು ಹಾಲು ಉತ್ಪಾದನೆ ಯಾಗುತ್ತಿದ್ದು, ಈ ಪೈಕಿ ಹಾಲು ಉತ್ಪಾದಕರ ಕುಟುಂಬದವರ ಬಳಕೆಗೆ ಬೇಕಾಗಿರುವ ಅವಶ್ಯ ಹಾಲನ್ನು ಬಿಟ್ಟು, ಸುಮಾರು 1.2 ಕೋಟಿ ಲೀಟರ್‌ಗಳಷ್ಟು ಹಾಲು ವಿವಿಧ ಹಂತದ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದೆ. ಈ ರೀತಿ ಲಭ್ಯವಾಗುವ ಹಾಲಿನ ಶೇಕಡಾ 70% ರಷ್ಟು ಅಂದರೆ, 80 ಲಕ್ಷ ಲೀಟರ್ ಗಳಷ್ಟು ಹಾಲನ್ನು ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾ ಮಂಡಳಿ- ಕೆಎಂಎಫ್ ರಾಜ್ಯದಲ್ಲಿರುವ ತನ್ನ ವಿವಿಧ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟಗಳಿಂದ ಶೇಖರಿಸುತ್ತದೆ.

ಮುಂದುವರೆದು, ವಿವಿಧ ಜಿಲ್ಲಾ ಒಕ್ಕೂಟಗಳು ರಾಜ್ಯಸರ್ಕಾರದ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ರೂ 5/- ಸಹಾಯಧನ ಸೇರಿದಂತೆ ಹಾಲು ಉತ್ಪಾದಕ ರೈತರಿಗೆ ಪ್ರತಿ ಲೀಟರ್‌ಗೆ ರೂ 29 ನೀಡುತ್ತಿದ್ದವು. ಆದರೆ, ರಾಜ್ಯದಲ್ಲಿನ ಎಲ್ಲ ಹಾಲು ಒಕ್ಕೂಟಗಳ ಹಾಲು ಉತ್ಪಾದಕ ರೈತರಿಂದ ಶೇಖರಿಸುವ ಪ್ರತಿ ಲೀಟರ್ ಹಾಲಿನ ಬೆಲೆಯನ್ನು ರೂ 1.5 ಗಳಿಂದ ಕೆಳಗೆ ಇಳಿಸಿದೆ. ಇದರಿಂದ, ರಾಜ್ಯದಲ್ಲಿನ ಹಾಲು ಉತ್ಪಾದಕ ರೈತರು ಸಂಕಷ್ಟದಲ್ಲಿ ಇದ್ದಾರೆ.

ಮುಂದುವರೆದು, ಕೋರೋನಾ ಸೊಂಕು ಹರಡುವಿಕೆ ಹಿನ್ನೆಲೆಯಲ್ಲಿ ದೇಶ ಮತ್ತು ರಾಜ್ಯದಲ್ಲಿ ವಿಧಿಸಲಾದ ಲಾಕ್ ಡೌನ್ ನಿಂದ ಹಾಲು ಉತ್ಪಾದಕರು ಆರ್ಥಿಕವಾಗಿ ಕುಗ್ಗಿದ್ದಾರೆ. ಹಸುಗಳಿಗೆ ಒದಗಿಸುವ ಆಹಾರದ ಬೆಲೆ ಗಗನಕ್ಕೇರಿದೆ. ಅಲ್ಲದೆ, ರಾಜ್ಯ ಸರ್ಕಾರದಿಂದ ಹಾಲು ಒಕ್ಕೂಟಗಳಿಗೆ ನೀಡಬೇಕಾಗಿರುವ ನೂರಾರು ಕೋಟಿ ಸಹಾಯಧನ ಬಿಡುಗಡೆ ಆಗಿಲ್ಲ.

ಈ ಹಿನ್ನಲೆಯಲ್ಲಿ ಸಾರ್ವಜನಿಕರ ಮತ್ತು ಹಾಲು ಉತ್ಪಾದಕರ ಹಿತದೃಷ್ಟಿಯಲ್ಲಿ ಈ ವಿಷಯವನ್ನು ಸದನದಲ್ಲಿ ಚರ್ಚಿಸಲು ಅವಕಾಶ ಮಾಡಿಕೊಡಬೇಕೆಂದು ಕೋರುತ್ತೇನೆ.

**ಹೇಳಿಕೆ:**

ಕರ್ನಾಟಕ ಹಾಲು ಮಹಾಮಂಡಳವು ಸಹಕಾರ ಕ್ಷೇತ್ರದ ಹೈನೋದ್ಯಮದಲ್ಲಿ ದೇಶದ ಎರಡನೇ ಅತೀದೊಡ್ಡ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಕಾರ್ಯವ್ಯಾಪ್ತಿಯಲ್ಲಿ ಒಟ್ಟು 16 ಜಿಲ್ಲಾ ಹಾಲು ಒಕ್ಕೂಟಗಳಡಿ 15,302 ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಸಂಸ್ಥೆಯು ಸುಮಾರು 26 ಲಕ್ಷ ನೊಂದಾಯಿತ ಸದಸ್ಯರನ್ನು ಹೊಂದಿದ್ದು, ಈ ಪೈಕಿ ಪ್ರಸ್ತುತ 8,60,000 ಸದಸ್ಯರು ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲನ್ನು ಪೂರೈಕೆ ಮಾಡುತ್ತಿದ್ದಾರೆ. 2022-23ನೇ ಸಾಲಿನಲ್ಲಿ ಜನವರಿ ಅಂತ್ಯದವರೆಗೆ ಸರಾಸರಿ 81.79 ಲಕ್ಷ ಕೆ.ಜಿ. ಹಾಲನ್ನು ಶೇಖರಣೆ ಮಾಡುತ್ತಿದ್ದು, ಸಂಸ್ಥೆಯು ಪ್ರತಿ ದಿನ ಸುಮಾರು ರೂ.29.00 ಕೋಟಿ ಮೊತ್ತವನ್ನು ಬಟವಾಡೆ ರೂಪದಲ್ಲಿ ಗ್ರಾಮೀಣ ಪ್ರದೇಶಕ್ಕೆ ತಲುಪಿಸುತ್ತಲಿದೆ. ರೈತರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಸಂಸ್ಥೆಯು ಮಹತ್ತರವಾದ ಪಾತ್ರವನ್ನು ವಹಿಸುತ್ತಿದೆ.

ಕರ್ನಾಟಕ ರಾಜ್ಯ ಸರ್ಕಾರವು 2008ನೇ ಸಾಲಿನಿಂದ "ಕ್ಷೀರಧಾರೆ" ಯೋಜನೆಯನ್ನು ಪ್ರಾರಂಭಿಸಿದ್ದು, ಪ್ರಸುತ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ರೂ.5/- ಪ್ರೋತ್ಸಾಹಧನವನ್ನು ಹಾಲು ಉತ್ಪಾದಕ ಸದಸ್ಯರಿಗೆ ನೀಡುವ ಮೂಲಕ ಕರ್ನಾಟಕ ಹಾಲು ಮಹಾಮಂಡಳಕ್ಕೆ ನಿರಂತರ ಬೆಂಬಲವನ್ನು ನೀಡುತ್ತಾ ಬಂದಿದೆ. ಸದರಿ ಯೋಜನೆ ಜಾರಿಗೆ ಬಂದ ನಂತರ ರಾಜ್ಯದಲ್ಲಿ ಹಾಲು ಉತ್ಪಾದನೆ ಪ್ರತಿ ವರ್ಷ ಹೆಚ್ಚಾಗುತಿದೆ. ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ರೈತರು ಕೆಲಸಕ್ಕಾಗಿ ವಲಸೆ ಹೋಗುವುದನ್ನು ತಡೆಗಟ್ಟುವಲ್ಲಿ ಈ ಯೋಜನೆಯು ಪ್ರಮುಖ ಪಾತ್ರ ವಹಿಸುತ್ತಿದೆ.

ಕರ್ನಾಟಕ ಸರ್ಕಾರ "ಕ್ಷೀರಧಾರೆ" ಯೋಜನೆಗೆಂದು 2022-23ನೇ ಸಾಲಿನಲ್ಲಿ ಅನುವು ಮಾಡಿಕೊಂಡಿರುವ ರೂ.1200.00 ಕೋಟಿ ಪೈಕಿ ರೂ.1140.00 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿದ್ದು, ಈಗಾಗಲೇ ರೂ.1078.74 ಕೋಟಿ ಮೊತ್ತವನ್ನು ಡಿ.ಬಿ.ಟಿ. ಮುಖೇನ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪಾವತಿ ಮಾಡಲಾಗಿರುತ್ತದೆ. ಏಪ್ರಿಲ್-2022 ರಿಂದ ಅಕ್ಟೋಬರ್-2022 ರ ವರೆಗೆ ಸಾಮಾನ್ಯ ವರ್ಗದಡಿಯ ಹಾಲು ಉತ್ಪಾದಕರಿಗೆ ರೂ.988.00 ಕೋಟಿ ಪ್ರೋತ್ಸಾಹಧನ, ಏಪ್ರಿಲ್-2022 ರಿಂದ ಡಿಸೆಂಬರ್-2022ರ ವರೆಗೆ ಪರಿಶಿಷ್ಟ ಜಾತಿ ವರ್ಗದ ಉತ್ಪಾದಕರಿಗೆ ರೂ.56.77 ಕೋಟಿ ಮತ್ತು ಪರಿಶಿಷ್ಟ ಪಂಗಡ ವರ್ಗದಡಿಯ ಹಾಲು ಉತ್ಪಾದಕರಿಗೆ ರೂ.33.97 ಕೋಟಿಯಂತೆ ಒಟ್ಟಾರೆಯಾಗಿ ರೂ.1078.74 ಕೋಟಿ ಮೊತ್ತ ಪ್ರೋತ್ಸಾಹಧನವನ್ನು ಪಾವತಿಸಲಾಗಿರುತ್ತದೆ. ನವೆಂಬರ್-2022 ಮಾಹೆಗೆ ರೂ.98.97 ಕೋಟಿ ಹಾಗೂ ಡಿಸೆಂಬರ್-2022ರ ಮಾಹೆಗೆ ರೂ.99.21 ಕೋಟಿಯಂತೆ ಒಟ್ಟಾರೆಯಾಗಿ ರೂ.198.18 ಕೋಟಿ ಮೊತ್ತದ ಪ್ರೋತ್ಸಾಹಧನವನ್ನು ಸಾಮಾನ್ಯ ವರ್ಗದಡಿಯ ರೈತರಿಗೆ ಪಾವತಿಸಲು ಬಾಕಿ ಇರುತ್ತದೆ. ಹೆಚ್ಚುವರಿ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.

ಇ- ಪಸಂಮೀ 64 ಸಲೆವಿ 2023

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು